**OS- 383/2017 D.W.1**

ದಿನಾಂಕಃ 07.06.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲು :** ವಾದಿಯ ಪರ ವಕೀಲರಿಂದ :-

ತಮ್ಮ ಪ್ರತಿವಾದ ಪತ್ರದಲ್ಲಿ ತಮ್ಮ ಆಸ್ತಿ ವಿಸ್ತೀರ್ಣ 40 x 50 ಎಂದು ನಮೂದಾಗಿದೆ ಎಂದರೆ ಸರಿ. ದಾವಾ ಆಸ್ತಿ ಮತ್ತು ನನಗೆ ಸೇರಿದ ಆಸ್ತಿ ಬೇರೆ ಬೇರೆ ಆಸ್ತಿಗಳು ಎಂದರೆ ಸರಿ. ತಮಗೆ ಸೇರಿದ ಆಸ್ತಿಯನ್ನು ಬಾವಿಕೆರೆ ಪಂಚಾಯಿತಿಯವರು ಮಂಜೂರು ಮಾಡಿರುವ ಬಗ್ಗೆ ತಾವೇನಾದರೂ ಮೂಲ ದಾಖಲಾತಿಯನ್ನು ಹಾಜರು ಮಾಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನಿಡಿ7 ರ ದಾಖಲಾತಿಯಲ್ಲಿ ತಮ್ಮ ಹೆಸರು ಜಯಲಕ್ಷ್ಮಿ ಕೋಂ ಕುಮಾರ ಎಂದು ನಮೂದಾಗಿದೆ ಎಂದರೆ ಸರಿ. ನಿಡಿ2 ರಿಂದ 5 ಕಂದಾಯ ರಶೀದಿಗಳಲ್ಲೂ ಕೂಡ ತಮ್ಮ ಹೆಸರು ಜಯಲಕ್ಷ್ಮಿ ಕೋಂ ಕುಮಾರ ಎಂದು ನಮೂದಾಗಿದೆ ಎಂದರೆ ಸರಿ. ನಾನು ರಂಗನಾಥಪುರದಲ್ಲಿ ಇರುವಾಗ ನನ್ನ ಮದುವೆ ಶಿವಕುಮಾರ್ ರವರ ಜೊತೆ ಆಗಿದೆ. ದಾವಾ ಆಸ್ತಿ ಸಂಪೂರ್ಣವಾಗಿ ವಾದಿಗೆ ಸೇರಿದ ಸ್ವತ್ತು ಎಂದರೆ ಸರಿಯಲ್ಲ.

ದಿನಾಂಕ 20.11.2017 ರಂದು ತಾವು ಏಕಾಏಕಿ ಕೆಲವು ಜನಗಳನ್ನು ಸೇರಿಸಿಕೊಂಡು ವಾದಿಯ ಸ್ವಾಧೀನಾನುಭವದಲ್ಲಿ ಇರುವ ದಾವಾ ಆಸ್ತಿಯಲ್ಲಿ ಗಲಾಟೆ ಮಾಡಿದ್ದೀರಾ ಎಂದರೆ ಸರಿಯಲ್ಲ. ದಾವಾ ಅಸ್ತಿಯಲ್ಲಿ ತಮಗೆ ಯಾವುದೇ ಹಕ್ಕು ಹಿತಾಸಕ್ತಿ ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇರುವುದಿಲ್ಲ.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇ.

(ಶಿವಕುಮಾರ್ ಆರ್.)
ಸಿವಿಲ್ ನ್ಯಾಯಾಧೀಶರು ಮತ್ತು ಹೆ. ಪ್ರ.ದ.ನ್ಯಾ.ದಂ.ರವರು,
ತರೀಕೆರೆ.